ಚಿಕ್ಕಬಳ್ಳಾಪುರ ತಾಲ್ಲೂಕಿನಲ್ಲಿ ಬಿ.ಸಿ.ಎಂ. ಹಾಸ್ಟೆಲ್‌ಗಳ ಮಂಜೂರಾತಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 347(651)

ಸದಸ್ಯರ ಹೆಸರು : ಶ್ರೀಮತಿ ಅನುಸೂಯಮ್ಮ ನಟರಾಜನ್ ಕೆ.ವಿ. (ಚಿಕ್ಕಬಳ್ಳಾಪುರ)

ಸಚಿವರ ಹೆಸರು ಮತ್ತು ಪದನಾಮ : ಶ್ರೀ ಕಾಗೋಡು ತಿಮ್ಮಪ್ಪ(ಸಮಾಜ ಕಲ್ಯಾಣ ಸಚಿವರು)

ಪ್ರಶ್ನೆ

1) ಚಿಕ್ಕಬಳ್ಳಾಪುರ ತಾಲ್ಲೂಕಿನಲ್ಲಿ ಬಿಸಿಎಂ ಹಾಸ್ಟೆಲ್‌ಗಳು ಕಡಿಮೆ ಇದ್ದು, ಇನ್ನೂ ಹೆಚ್ಚಿನ ಸಂಖ್ಯೆಯ ಬಿಸಿಎಂ ಹಾಸ್ಟೆಲ್‌ಗಳ ಅಗತ್ಯವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2) ಹಾಗಿದ್ದಲ್ಲಿ ಈ ಕುರಿತು ಸರ್ಕಾರ ಸೂಕ್ತ ಕ್ರಮ ಕೈಗೊಳ್ಳುವುದೇ?

ಉತ್ತರ

1) ಚಿಕ್ಕಬಳ್ಳಾಪುರ ತಾಲ್ಲೂಕಿನಲ್ಲಿ ಹಾಲಿ, 2 ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳು, 1 ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು, ಕಾರ್ಯನಿರ್ವಹಿಸುತ್ತಿದೆ.

2) ಪ್ರತಿ ವರ್ಷ ಹೊಸ ವಿದ್ಯಾರ್ಥಿನಿಲಯಗಳನ್ನು ಮಂಜೂರು ಮಾಡುವಂತೆ ಸಾಕಷ್ಟು ಬೇಡಿಕೆಗಳು ರಾಜ್ಯದಾದ್ಯಂತ ಬರುತ್ತಿದೆ. ಈ ಸ್ಥಳಗಳಲ್ಲಿ ಹೊಸ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಬೇಕಾದ ಅವಶ್ಯಕತೆ, ಸ್ವಂತ ಕಟ್ಟಡ ನಿರ್ಮಿಸಲು ನಿವೇಶನದ ಲಭ್ಯತೆ, ಬಾಡಿಗೆ ಕಟ್ಟಡದ ಲಭ್ಯತೆ ಹಾಗೂ ಹಣಕಾವಕಾಶದ ಲಭ್ಯತೆಯನ್ನು ಆಧರಿಸಿ ಹಂತ ಹಂತವಾಗಿ ಹೊಸ ವಿದ್ಯಾರ್ಥಿನಿಲಯಗಳನ್ನು ಅಗತ್ಯ ಸ್ಥಳಗಳಲ್ಲಿ ಆದ್ಯತೆಯ ಮೇರೆಗೆ ಮಂಜೂರು ಮಾಡಲು ಪರಿಶೀಲಿಸಲಾಗುವುದು.

ಸೂಳ್ಯ ಕ್ಷೇತ್ರದಲ್ಲಿ ವಿದ್ಯಾರ್ಥಿ-ವಿದ್ಯಾರ್ಥಿನಿ ನಿಲಯಗಳಲ್ಲಿ ಖಾಲಿ ಇರುವ ಹುದ್ದೆಗಳ ಭರ್ತಿ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 348(634)

ಸದಸ್ಯರ ಹೆಸರು : ಶ್ರೀ ಅಂಗಾರ ಎಸ್.(ಸುಳ್ಯ)